MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 31-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕಚ್ಚಾ ಗೋಡಂಬಿ ಅಲ್ಪ ಪ್ರಮಾಣದಲ್ಲಿ ಆವಕ ಆರಂಭ

ಈ ವರ್ಷ ಕಚ್ಚಾ ಗೋಡಂಬಿ ಸೀಸನ್ ಆರಂಭವಾಗುತ್ತಿದ್ದು, ಅಲ್ಪ ಪ್ರಮಾಣದಲ್ಲಿ ಹೊಸ ಬೆಳೆಯ ಕಚ್ಚಾ ಗೋಡಂಬಿ ಮಾರುಕಟ್ಟೆಗೆ ಆವಕ ಆರಂಭವಾಗಿದೆ. ದರ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಕಡಿಮೆಯಿದೆ. ಈ ವರ್ಷ ಹವಾಮಾನ ಪೂರಕವಿರುವುದರಿಂದ ಉತ್ತಮ ಬೆಳೆಯಾಗುವ ಮತ್ತು ಉತ್ಪಾದನೆ ಹಿಂದಿನ ವರ್ಷಕ್ಕಿಂತ ಹೆಚ್ಚಳವಾಗುವ ನಿರೀಕ್ಷೆಯಿದೆ.

## ಗೋವಾದಲ್ಲಿ ಕಚ್ಚಾ ಗೋಡಂಬಿ ವಲಯಗಳ ಏಲಂ ಪ್ರಾರಂಭ

ಗೋವಾದಲ್ಲಿ ಕಚ್ಚಾ ಗೋಡಂಬಿ ವಿಭಾಗಗಳ 1517 ವಲಯಗಳಲ್ಲಿ 187 ವಲಯಗಳ ಏಲಂ ಆಗಿದೆಯೆನ್ನಲಾಗಿದ್ದು, ಇದರಿಂದ ಸರಕಾರಕ್ಕೆ ರೂ. 22.7 ಲಕ್ಷಗಳ ಆದಾಯ ಬಂದಿದೆಯೆನ್ನಲಾಗಿದೆ. ಪೆರ್ನ ತಾಲೂಕಿನ ಒಂದು ರೂ. 1.5 ಲಕ್ಷಕ್ಕೆ ಏಲಂ ಆಗಿದೆಯೆನ್ನಲಾಗಿದೆ. ಈ ತಾಲೂಕಿನಿಂದ ಅತ್ಯಧಿಕ ಆದಾಯ ರೂ. 10.9 ಲಕ್ಷ ದೊರತಿದೆಯೆನ್ನಲಾಗಿದೆ. ಸತಾರಿ ತಾಲೂಕಿನಲ್ಲಿ ಅತ್ಯಧಿಕ 620 ಗೋಡಂಬಿ ವಲಯಗಳಿದ್ದು, ಅದರಲ್ಲಿ ಪ್ರಥಮ ಏಲಂನಲ್ಲಿ 26 ಮಾತ್ರ ಏಲಂ ಆಗಿದೆಯೆನ್ನಲಾಗಿದೆ. ಫೆಬ್ರವರಿ ಪ್ರಥಮ ವಾರದಲ್ಲಿ 2ನೇ ಹಂತದ ಏಲಂ ನಡೆಯಲಿದೆಯೆನ್ನಲಾಗಿದೆ.

## ಉತ್ಪಾದನೆ ಇಳಿಕೆ ನಿರೀಕ್ಷೆಯಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಹೆಚ್ಚಳ

ನೆರೆ ಬಾಧೆಯಿಂದ ಪಾಮ್ ಉತ್ಪಾದನೆ ಕುಂಠಿತವಾಗಿ ಪಾಮೆಣ್ಣೆ ಉತ್ಪಾದನೆ ಇಳಿಕಯಾಗುವ ಕಳವಳದಿಂದ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 3ನೇ ದಿನ ಹೆಚ್ಚಳವಾಗಿದ್ದು, ಜನವರಿ 10, 2023 ರ ನಂತರದ ಗರಿಷ್ಠ ಮಟ್ಟ ತಲುಪಿದೆಯೆನ್ನಲಾಗಿದೆ. ಚೀನಾದ ಹೊಸವರ್ಷದ ಲೂನಾರ್ ಹಬ್ಬದ ನಂತರ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದ್ದು, ದಲಿಯನ್ ಮಾರುಕಟ್ಟೆಯಲ್ಲಿ ಸೋಯಾಬೀನ್ ದ ಹೆಚ್ಚಳವಾಗಿದೆಯೆನ್ನಲಾಗಿದೆ. ಪಾಮೆಣ್ಣೆ ಉತ್ಪಾದನೆ ಇಳಿಕೆಯಲ್ಲಿ ದರದ ಮೇಲೆ ಪರಿಣಾಮವಾಗುವ ಸಾಧ್ಯತೆಯಿದೆ.

## ಚಹಾ ಪುಡಿ ದರ ಹೆಚ್ಚಳ

ಹವಾಮಾನ ವೈಪರೀತ್ಯದಿಂದ ಉತ್ಪಾದನೆ ಕುಂಠಿತವಾಗುತ್ತಿದ್ದು ಚಹಾ ಪುಡಿ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಹಿಂದಿನ ವರ್ಷ ಹೆಚ್ಚಳವಿದ್ದ ದರ ಕ್ರಮೇಣ ಇಳಿಕೆಯಾಗಿತ್ತು. ಈಗ ಮತ್ತೆ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ.